## ನಂಬಿಕೆಯ ನೂಲು

ಬಸು ಬೇವಿನಗಿಡದ
ಕಲೆ: ಎಚ್‌ಎಸ್‌ ಮೋನಪ್ಪ

# ಚಾಮುಂಡಿಯಾದ ಮಾಯಕ್ಕ

‘ಈ ಬಿಕನಾಸಿ ಇಲ್ಲ್ಯಾಕ ಬಂದನೊ ಏನೋ?’ ಆಘಾತಗೊಂಡಿದ್ದ ಆಕೆ ಸರಕ್ಕನೆ ಒಳಗೆ ಹೋದಳು. ಮಾಯಕ್ಕನ ಮುಖ ಒಮ್ಮೆಲೆ ಸಪ್ಪಗಾದುದಕ್ಕೆ ಶಿವಣ್ಣ ಆಶ್ಚರ್ಯಗೊಂಡ. ಅವಳೇಕೆ ಹೆದರಿಕೊಂಡಳು? ಅಷ್ಟೇಕೆ ಲಗುಬಗೆಯಿಂದ ಒಳಗೆ ಹೋದಳು? ಏನೋ ತೊಂದರೆಯಿದೆ ಎನಿಸಿತು. ದುಂಡಪ್ಪಕಾಕಾ ಎರಡು ದಿನ ಬೆಳಗಾವಿಗೆ ಹೋಗಿದ್ದರಿಂದ ಹೊಲಕ್ಕೆ ಈತ ತುರ್ತಾಗಿ ಹೋಗಬೇಕಿತ್ತು. ಆದರೂ ಇಲ್ಲಿಯ ಸ್ಥಿತಿ ನೋಡಿ ಅಲ್ಲಿಯೆ ಕಟ್ಟೆಯ ಮೇಲೆ ಕುಳಿತ.

‘ಏನ್ ದ್ಯಾವಣ್ಣ, ನಿನ್ನ ಹೇಂತಿ ಮತ್ತೆ ಯಾವುದೊ ಹೊಸ ಗಿರಾಕಿ ಹುಡುಕ್ಯಾಳ ಕಾಣತೈತಲ್ಲ? ಯಾರಾಂವ ಹೊರಗೆ ಕಟ್ಟಿ ಮ್ಯಾಲ ಕುಂತಾವ?’ ಮುತ್ತಪ್ಪ ವ್ಯಂಗವಾಗಿ ನಕ್ಕ. ಯಾಕೊ ಇವತ್ತು ಟೈಮ್ ಸರಿಯಿಲ್ಲವೆಂದುಕೊಂಡ ದೇವಪ್ಪ ‘ಬಾರೊ ಮುತ್ತಣ್ಣ... ಇಂವ ಶಿವಣ್ಣಂತ. ಅಂವಂದು ಇಲ್ಲೆ ಬಾಜು ಹೊಲ ಐತಿ. ಆಗಾಗ ನಮ್ಮ ಅಂಗಡ್ಯಾಗೂ ಕೆಲಸ ಮಾಡ್ತಾನ’.

ಮುತ್ತಪ್ಪ ಶಿವಣ್ಣನನ್ನು ಒಮ್ಮೆ ತೂಗಿ ನೋಡಿದ. ‘ಹೂಂ. ನನಗ ಗೊತ್ತೈತಿ. ಇಂವದು ಎಲ್ಲ ಗೊತ್ತೈತಿ ನನಗ. ಊರ ಉಡಾಳ ಇಂವ. ಇಂವನ್ಯಾಕ ಒಳಗ ಬಿಟ್ಟಕೊಂಡಿ? ದೇವಣ್ಣ ನೀನು ಕಣ್ಣುಮುಚ್ಚಿಕೊಂಡು ಕುಂತೀಯ. ಅಂವ ಹಾಲು ಕುಡೀಲಿಕ್ಕೆ ಹತ್ಯಾನು. ನಿನ್ನ ಹೊಟೇಲ್ ಅಗದಿ ಸಾಪ್ ಮಾಡ್ತಾನ, ತಗೋ.’

ಮುತ್ತಣ್ಣನ ಬಗ್ಗೆ ಮೊದಲೇ ಅಲ್ಪಸ್ವಲ್ಪ ತಿಳಿದುಕೊಂಡಿದ್ದ ಹೊಟೇಲ್‌ದೊಳಗಿನ ಮಂದಿ ಒಬ್ಬೊಬ್ಬರೇ ಕಾಲು ಕೀಳತೊಡಗಿದರು. ‘ಯಬರೇಶಿ ಬಂದಪಾ, ಸುಮ್ನ ಇಲ್ಲಿಂದ ಹೋಗೋದು ಚುಲೊ. ಅವರ ಜಗಳದಾಗ ನಾವ್ಯಾಕ?’ ಮಂದಿ ಬಾಯಲ್ಲಿದ್ದುದನ್ನು ಅಬಡಜಬಡ ನುರಿಸುತ್ತ ಬಿಲ್ ಸಹ ಕೊಡದೆ ‘ಆಮ್ಯಾಲ ಬರ್ತೇವೊ ದ್ಯಾವಣ್ಣ, ಸ್ವಲ್ಪ ಕೆಲ್ಸ ಐತಿ’ ಎಂದು ನಡೆದೇ ಬಿಟ್ಟರು. ಹೊಟೇಲದಲ್ಲಿ ಇಷ್ಟೆಲ್ಲ ಜನರಿರುವಾಗ ಮುತ್ತಪ್ಪ ತನಗೇನು ಮಾಡಿಯಾನು ಎನ್ನುವ ಭ್ರಮೆಯಲ್ಲಿದ್ದ ದೇವಪ್ಪನಿಗೆ ನಿರಾಶೆಯಾಯಿತು. ಜನ ಅವನಿಗೆ ಅಷ್ಟು ಹೆದರುತ್ತಾರೆಯೆ? ದೇವಣ್ಣ ಚಹಾ ಮತ್ತು ಖಾರಾ ಸೇವು ತಂದಿಟ್ಟ. ಮುತ್ತಪ್ಪ ಒಂದೊಂದೇ ಕಾರದಾನಿಯನ್ನು ಬಾಯಿಗೆ ಹಾಕುತ್ತ ಸೊರ್ ಸೊರ್ ಎಂದು ಚಹಾ ಹೀರತೊಡಗಿದ. ಮಾಯಕ್ಕ ಅಡುಗೆ ಮನೆಯಿಂದಲೇ ಎಲ್ಲ ಗಮನಿಸುತ್ತಿದ್ದಳು.

‘ಅಲ್ಲೋ ದ್ಯಾವಣ್ಣ, ನಿನಗ ಎರಡು ಸಲ ಹೇಳಿಯಾತು. ಯಾಕ ನಮ್ಮ ಮಾತಂದ್ರ ನಿನಗ ಕಾಲ ಕಸ ಆಗೇತೇನು? ಮಾಯವ್ವನನ್ನ ನೀ ಬಿಡಬೇಕು. ನಮ್ಮೆಲ್ಲರ ಒಪ್ಪಿಗೆ ಇಲ್ಲದ ಆಕೀನ್ನ ಮದುವಿ ಹೆಂಗ ಆಗ್ತಿ? ಚಾದಂಗಡಿ ಐತೆಂತ ಏನು ದೊಡ್ಡ ಪುಂಡ ಆಗಿಯೋ? ನಮ್ಮ ಅಕ್ಕ ಹೇಳಿ ಕಳಿಸ್ಯಾಳ. ಆಕೀನ ತವರುಮನೆಗೆ ಕರಕೊಂಡ ಬಾ ಅಂದಾಳ. ಎಷ್ಟು ಸಲ ಹೇಳಬೇಕೊ ನಿನಗ?’

ತಾನೇಕೆ ಹೆದರಬೇಕು ಎಂದುಕೊಂಡಿದ್ದ ದೇವಣ್ಣನಿಗೆ ಮೊದಲ ಬಾರಿಗೆ ಗಾಬರಿಯಾಯಿತು. ಊರವರು ಯಾರೂ ತನ್ನ ಬಳಿ ನಿಲ್ಲಲಿಲ್ಲ. ಶಿವಣ್ಣ ಒಬ್ಬನಾದರೂ ಇದ್ದಾನೆ. ‘ಅಲ್ಲೋ ಮುತ್ತಣ್ಣ, ಏನಂದ್ರ...’ ದೇವಣ್ಣ ವಾತಾವರಣವನ್ನು ತಿಳಿಗೊಳಿಸಲು ಪ್ರಯತ್ನಿಸಿದ. ದೇವಣ್ಣ ಹೆದರಿದ್ದಾನೆಂಬುದು ಮುತ್ತಣ್ಣನಿಗೆ ತಿಳಿಯಲು ತಡವಾಗಲಿಲ್ಲ. ಹೋಗಿ ಅವನ ಗಲ್ಲಾ ಪೆಟ್ಟಿಗೆಯ ಮೇಲೆ ಕುಳಿತ. ವಜ್ರಮುನಿ ರಾಜಕುಮಾರರ ಸಿನಿಮಾ ಜಾಹೀರಾತಿನ ಚಿತ್ರ ನೋಡುತ್ತಿದ್ದ ಶಿವಣ್ಣ ಒಂದು ಕ್ಷಣ ಒಳಗೆ ಬಂದು ಮುತ್ತಣ್ಣನ ಕಡೆಗೆ ಕೆಕ್ಕರಿಸಿ ನೋಡಿ ಅಂಗಳದ ಹೊರಗೆ ಹೋಗಿ ಗ್ಯಾರಿ ಉಗುಳಿ ಮತ್ತೆ ಕಟ್ಟೆಯ ಮೇಲೆ ಕುಳಿತ. ಈ ಹೊಸಬನಿಂದ ಮೊದಲ

